ಹಾಕುತ್ತಾಳೆ. ಉಳಿದ ದಿನಗಳಲ್ಲಿ ಜಗುಲಿಯ ಮೆಟ್ಟಲಿನೆದುರಿಗೆ ಚಿಕ್ಕ ರಂಗೋಲಿ ಅಷ್ಟೆ. ಇಂದು ಹಾಗೆ ಹೊರಬಂದವಳಿಗೆ ಆಶ್ಚರ್ಯ. ವಯಸ್ಸಾದ ಆ ಹೆಂಗಸಿನ ಮುಖದ ಮೇಲಿನ ಗಾಬರಿ, ಕಳವಳ ಆಕೆಯನ್ನು ಸುಲಭದಲ್ಲಿ ತಟ್ಟಿತ್ತು.

'ಏನಮ್ಮಾ... ಏನಾಗಬೇಕು? ಎಲ್ಲಿಂದ ಬಂದದ್ದು?' ಆಕೆ ಹೊದೆದುಕೊಂಡ ಶಾಲು, ಕೈಯ್ಯಲ್ಲಿನ ಬ್ಯಾಗು ಕಂಡಾಗಲೇ ಶ್ಯಾಮಲೆಗೆ ಹೊಳೆದಿತ್ತು ಅವಳು ಹೊರಗಿನಿಂದ ಬಂದವಳೆಂದು. ಅವಳನ್ನು ನೋಡಿದ್ದೇ ಆ ಮುದುಕಿ ಶಾಂತಾರಾಮನೊಡನೆ ಮಾತು ಮುಂದುವರಿಸುವ ಇಚ್ಛೆಯನ್ನೇ ತೋರಿಸದೆ ಅವಳತ್ತ ತಿರುಗಿ ತನ್ನ ಕೈಯ್ಯಲ್ಲಿದ್ದ ಪೇಪರಿನ ಕಟ್ಟನ್ನು ಅವಳ ಕೈಗೇ ತುರುಕಿದ್ದಳು.

'ಅಮ್ಮ, ಈ ವಿಳಾಸ ಎಲ್ಲಿದೆಯೆಂದು ಗೊತ್ತಾ ನಿಮಗೆ. ಆ ರಿಕ್ಷಾದವ ಇಲ್ಲೇ ಇದೆಯೆಂದು ಹೇಳಿ ಹೋಗಿಯೇ ಬಿಟ್ಟ. ಅದೇ ನಿಮ್ಮ ಯಜಮಾನರನ್ನು ನೋಡಿ ಒಳಗೆ ಬಂದೆ. ನೀವೇ ಸಿಕ್ಕಿದಿರಿ. ಒಳ್ಳೆಯದೇ ಆಯ್ತು' ಮಾತಾಡುತ್ತ ಆಡುತ್ತ ಉಸ್ಸೆಂದು ಮೆಟ್ಟಿಲ ಮೇಲೆ ಕುಳಿತೇ ಬಿಟ್ಟಳು ಮುದುಕಿ.

ಆಕೆ ಆ ರಸ್ತೆಯಿಂದ ಈ ರಸ್ತೆಗೆ ಸುತ್ತಾಡುತ್ತಿದ್ದುದನ್ನು ನೋಡಿದ್ದ ಶಾಂತಾರಾಮನಿಗೆ ಆಕೆ ಹಾಗೆ ಉಸ್ಸೆಂದು ಕುಳಿತದ್ದು ವಿಶೇಷವಾಗೇನೂ ಕಾಣಿಸಲಿಲ್ಲ. ಆಕೆಯ ಕೈಯ್ಯಿಂದ ಆಗಲೇ ಆ ಪೇಪರಿನ ಬಂಡಲನ್ನು ತೆಗೆದುಕೊಂಡು ಅದರಲ್ಲಿ ಏನಿದೆ ಎನ್ನುವುದನ್ನು ನೋಡಲು ಕಷ್ಟಪಡುತ್ತಿದ್ದ ಹೆಂಡತಿಯೊಡನೆ ಹೇಳಿದ, 'ಆ ಪೇಪರನ್ನು ಇಲ್ಲಿ ಕೊಡು. ನೀನು ಒಳ ಹೋಗಿ ಕಾಫಿಯನ್ನೋ ಇಲ್ಲ ಬೆಲ್ಲ ನೀರನ್ನೋ ತಂದು ಕೊಡು ಆಕೆಗೆ. ತೀರಾ ಸುಸ್ತಾದ ಹಾಗೆ ಕಾಣಿಸುತ್ತದೆ' ಎಂದ.

ಇವ ಹೆಂಡತಿಯ ಕೈಯ್ಯಿಂದ ತೆಗೆದುಕೊಂಡ ಆ ಕಾಗದದ ಕಟ್ಟನ್ನು ಬಿಡಿಸುತ್ತಿದ್ದಂತೆಯೇ ಆಕೆ ಒಳಗೆ ಹೋದಳು. ಕಟ್ಟನ್ನು ಬಿಡಿಸಿದವನಿಗೆ ಅದರಲ್ಲಿ ಏನೂ ಸಿಗಲಿಲ್ಲ. ಒಂದಿಷ್ಟು ಅಂಗಡಿಗಳ ಬಿಲ್ಲುಗಳಿದ್ದುವು. ಯಾವು ಯಾವುದೋ ಊರಿನವು. ಓದಲಿಕ್ಕೂ ಬರದಷ್ಟು ಮೋಡಿ ಅಕ್ಷರಗಳು. ಇನ್ನೂ ಬಿಡಿಸಿ ನೋಡಿದ. ಎಲ್ಲಿಯೂ ವಿಳಾಸ ಸಿಗಲಿಲ್ಲ. ನಡು ನಡುವೆ ಹರಿದ ವಾರ್ತಾಪತ್ರಿಕೆಯ ಚೂರುಗಳೂ. ಮುದುಕಿಯತ್ತ ನೋಡಿದ. ತೀವ್ರ ನಿರೀಕ್ಷೆಯಿಂದ ನೋಡುತ್ತಿದ್ದ ಅವಳನ್ನು ಕನಿಕರದಿಂದ ನೋಡುತ್ತ, 'ಅಜ್ಜೀ ಇಲ್ಲಿ ಯಾವುದೇ ವಿಳಾಸವೂ ಸಿಗುತ್ತಿಲ್ಲವಲ್ಲ. ನಿನಗೇನಾದರೂ ನೆನಪಿದೆಯಾ. ಹೇಳುತ್ತೀಯಾ'.

'ಅಯ್ಯೋ ಇಲ್ಲ ಮಗಾ. ಅಲ್ಲ ಆ ಆಟೊದವನಿಗೆ ನೋಡಲು ಕೊಟ್ಟಿದ್ದೆ. ಅದನ್ನು ಹಿಡಿದುಕೊಂಡೆ ಹೋದನೇ ಹಾಗಾದರೆ. ಅಯ್ಯೋ ಇನ್ನೇನಪ್ಪ ಮಾಡೋದು. ಅದು ನನ್ನ ಹಿರೀ ಮಗನ ವಿಳಾಸ. ಇಲ್ಲಿಯೇ ಎಲ್ಲಿಯೋ ಇದ್ದಾನೆ. ಅವನ ಮನೆಗೇ ಹೋಗಬೇಕು ನಾನು.'

ಅಷ್ಟರಲ್ಲಿ ಒಳಗಿನಿಂದ ದೊಡ್ಡ ಲೋಟವೊಂದರಲ್ಲಿ ಕಾಫಿಯನ್ನು ಹಿಡಿದುಕೊಂಡು ಶ್ಯಾಮಲೆ ಬಂದಿದ್ದಳು. 'ತಕೊಳ್ಳಜ್ಜಿ' ಎಂದು ಎದುರಿಗೆ ಹಿಡಿದ ಆ ಲೋಟವನ್ನು ಕಸಿದುಕೊಂಡೇ ತೆಗೆದುಕೊಂಡ ಮುದುಕಿ ಹೊಗೆಯಾಡುತ್ತಿದ್ದ ಆ ಕಾಫಿಯ ಬಿಸಿಯನ್ನು ಲೆಕ್ಕಿಸದೇ ಕುಡಿಯತೊಡಗಿದಳು. ಕಣ್ಣು ಮುಚ್ಚಿಕೊಂಡು ಕಾಫಿಯ ರುಚಿಯನ್ನು ಆಸ್ವಾದಿಸುತ್ತ ಕುಡಿಯುತ್ತಿದ್ದ ಆಕೆಯ ಮುಖದ ಮೇಲೆ ಕಾಣಿಸಿಕೊಳ್ಳುತ್ತಿದ್ದ ತೃಪ್ತಿಯ ಭಾವನೆಯನ್ನು ಗಮನಿಸಿದ ಗಂಡ ಹೆಂಡತಿ ಇಬ್ಬರಿಗೂ ಎಲ್ಲಿಲ್ಲದ ಸಮಾಧಾನ.

ಕಾಫಿ ಲೋಟವನ್ನು ಕೆಳಗಿಟ್ಟ ಆಕೆ ಅಳಲಿಕ್ಕೇ ತೊಡಗಿದ್ದಳು. ಕಾಫಿ ಕುಡಿಯುವಷ್ಟು ಹೊತ್ತೂ ಮುಖದ ಮೇಲೆ ಕಾಣಿಸಿಕೊಳ್ಳುತ್ತಿದ್ದ ಆ ತೃಪ್ತಿಯ ಭಾವನೆ ಎಲ್ಲೋ ಮಾಯವಾಗಿತ್ತು. ಗೋಳೋ ಎಂದು ಅಳಹತ್ತಿದ ಆಕೆಗೆ ಈ ಗಂಡ ಹೆಂಡತಿಯರಿಬ್ಬರೂ, 'ಸಮಾಧಾನ ಮಾಡಿಕೋ ಅಜ್ಜಿ. ಅಳುವಷ್ಟು ಏನಾಗಿದೆ ಈಗ... ವಿಳಾಸ ಸಿಕ್ಕಿಯೇ ಸಿಗುತ್ತೆ' ಎನ್ನುತ್ತಿದ್ದರೆ ಅವಳ ಅಳು ಇನ್ನೂ ಜೋರಾಗಿತ್ತು. ಎಲ್ಲಿಯವರೆಗೆಂದರೆ ಅಕ್ಕ ಪಕ್ಕದವರೋ ಇಲ್ಲ ರಸ್ತೆಯ ಮೇಲೆ ಹೋಗುವವರೋ